

# ನಗು ಮುಡಿದ ಹುಡುಗಿ

ಹುಡುಗಿ ಎಂದರೆ ಬಣ್ಣದ ಚಿತ್ತಾರ
ಹೌದೆ ಅಲಂಕೃತ ಆಕಾರ?

ಅತ್ತಿತ್ತ ಉರುಳಾಡುವ
ಗೊಂಬೆಯೂ ಹೆಣ್ಣೇ
ಆದಕೆ ಕಿರೀಟ ಇಟ್ಟು ಕೈಯನ್ನ
ವರದಹಸ್ತ ಮಾಡಿಬಿಟ್ರೆ ಏನಂತೆ?
ಬೇಡವೆ ಒಡವೆ ವಸ್ತ್ರದ ಸಿಂಗಾರ?

ಗೊಂಬೆ ಮುಖದ ನಗು
ಆ ಹುಡುಗಿ ಮುಖಕ್ಕೆ ಮೆತ್ತಿಕೊಂಡಿದೆ
ಅಥವಾ ಅದಲುಬದಲಾಯಿತೆ?
ಪೇಟೆಯಲಿ ರೆಡಿಮೇಡ್ ನಗು ಸಿಗತ್ತಾ?
ನೀವಾರೂ ಮೆತ್ತಿಕೊಳ್ಳಿ, ಗೊಂಬೆಗಾದ್ರೂ ಮೆತ್ತಿ
ಮೆತ್ತಲು ಹೆಣ್ಣು ಮೂತಿ ಒಂದಿದ್ರೆ ಸಾಕು.

ದೇವರಾಗು, ಅಮ್ಮನಾಗು ಇಲ್ಲದಿರೆ
ಅಲಂಕಾರ ಮಾಡಿಕೊಂಡು
ದೊಡ್ಡ ಮೀಸೆ ಪೇಟದಪ್ಪನಿಗೆ
ನಿಂತಲ್ಲೇ ದಿಲ್‌ಖುಶ್ ಮಾಡು.



ಜಾತ್ರೆ ಮೇಳ ಎಲ್ಲಾ ಮುಗಿದ ಮೇಲೆ
ಮನೆಗೆ ಹೋಗಿ ರೊಟ್ಟಿ ಸುಡು.
ಬಟ್ಟೆ ಕಳಚಿ ಖೊಟ್ಟಿ ನಗು ತೆಗೆದು
ಗೂಟಕ್ಕೆ ತೂಗಿ ಹಾಕು.
ತಟ್ಟಿತಟ್ಟಿ ಎಲ್ಲರ ಹೊಟ್ಟೆ ನೋಡು.
ರೊಟ್ಟಿ ಆಟಕ್ಕೆ ನಗು ಬೇಡವೇ ಬೇಡ.

● ಜಯಶ್ರೀ ಜಗನ್ನಾಥ

# ಗೊಂಬೆ ಮಾತು

ಎಲ್ಲಿಯವಳೇ ನೀನು ರಂಭೆ?
ನಾನು ಚೆನ್ನಪಟ್ಟಣದ ಗೊಂಬೆ!
ಇನ್ನೊಬ್ಬಳು ಬುಟ್ಟ ಬೊಮ್ಮ?
ಹೂಂ, ನನ್ನ ತಂಗಿ ಕಣಮ್ಮ

'ಶುರುವಾಗಲಿ ಗಿರಕಿ,
ಶುರುವಾಗಿದೆ ಹಾಡು'
'ಕಂಡಲ್ಲೆಲ್ಲಾ ಕಾಣುತ್ತಿದೆ
ಕೊರೊನಾದ ಕೇಡು
ಎಲ್ಲವನ್ನೂ ಮರೆಸಿ ಕುಣಿವಾಸೆ ನನಗೆ'
'ಕೊರೊನಾ ತೊಲಗಿಸು
ವಂದಿಸುವೆ ನಿನಗೆ'

ಸೊಂಟಕ್ಕೆ ಕೈ ಇಟ್ಟ ಹುಡುಗೀ
ನಿನ್ನ ಮಾಸ್ಕು ಎಲ್ಲೇ ಬೆಡಗಿ?
ಗಿರಕಿ ಗೊಂಬೆ ನಾನು
ಹೊಡೆಯುವೆ ಗಿರಕಿ
ಕೊರೊನಾ ಲಸಿಕೆ ನೀವೇ ಹುಡುಕಿ!

● ಕುಂಕುಮಾ ಕೊಡ್ಲೆಕೆರೆ